ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ
ಕೆ.ಆರ್.ನಗರ

**ಒ.ಎಸ್. 329/2019**

**ಪಿಡಬ್ಲ್ಯೂ-1**

ದಿನಾಂಕ **29-09-2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಶ್ರೀ. ಜೆ ಜಿ ವಕೀಲರಿಂದ ವಾದಿ ಪರ ವಕೀಲರುಃ

ನನ್ನ ಸಾಕ್ಷಿ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳು ನನಗೆ ತಿಳಿದಿದ್ದು ಹಾಗೂ ಅವು ಸತ್ಯವಾಗಿರುತ್ತವೆ.

ನನ್ನ ದಾವೆಗೆ ಸಂಬಂಧಪಟ್ಟಂತೆ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

| ದಾಖಲಾತಿಗಳು | ನಿಶಾನೆ |
|---|---|
| ದಿಃ 19-04-1988 ರ ಕ್ರಯ ಪತ್ರದ ದೃಢಿಕೃತ ನಕಲು (ಇದರ ಮೂಲ ದಾಖಲಾತಿಯನ್ನು ವಿಚಾರಿಸಿದಾಗ ಅದು ಕಳೆದು ಹೋಗಿದೆ ಎಂದು ಸಾಕ್ಷಿಯು ನುಡಿದ ಮೇರೆಗೆ ಅದರ ದೃಢಿಕೃತ ನಕಲನ್ನು ನಿಶಾನಿಕರಿಸಲಾಗಿದೆ) | ನಿಪಿ 1 |
| ದಿಃ 26-03-1981 ರ ಕ್ರಯ ಪತ್ರದ ದೃಢಿಕೃತ ನಕಲು (ಇದರ ಮೂಲ ದಾಖಲಾತಿಯನ್ನು ವಿಚಾರಿಸಿದಾಗ ಅದು ಪ್ರತಿವಾದಿಗಳ ಬಳಿ ಇರುವುದಾಗಿ ಸಾಕ್ಷಿಯು ನುಡಿದ ಮೇರೆಗೆ ಅದರ ದೃಢಿಕೃತ ನಕಲನ್ನು ನಿಶಾನಿಕರಿಸಲಾಗಿದೆ) | ನಿಪಿ 2 |
| ಖಾತೆ ಸಂಖ್ಯೆ127 ರ ಋಣಭಾರರಾಹಿತ್ಯ ಪ್ರಮಾಣ ಪತ್ರ | ನಿಪಿ 3 |
| ನಮ್ಮ ಕುಟುಂಬದ ವಂಶವೃಕ್ಷದ ಪ್ರಮಾಣ ಪತ್ರ (marked for reference this case only) | ನಿಪಿ 4 |
| ದಿಃ 26-02-2014 ರಂದು ಮಾಹಿತಿ ಹಕ್ಕು ಕಾಯಿದೆ ಅಡಿ ನನಗೆ ಪಿ ಡಿ ಓ, ಹೊಸ ಅಗ್ರಹಾರ ಗ್ರಾಮ ಪಂಚಾಯಿತಿ ನೀಡಿರುವ ಹಿಂಬರಹ | ನಿಪಿ 5 |
| ಪಿ ಡಿ ಓ, ಹೊಸ ಅಗ್ರಹಾರ ಗ್ರಾಮ ಪಂಚಾಯಿತಿ ರವರಿಗೆ ನಾನು ನೀಡಿರುವ ಅರ್ಜಿ ಪ್ರತಿ | ನಿಪಿ 6 |
| ದಿಃ 04.09.2018 ರಂದು ಪಿ ಡಿ ಓ, ಹೊಸ ಅಗ್ರಹಾರ ಗ್ರಾಮ ಪಂಚಾಯಿತಿ ರವರಿಗೆ ನಾನು ನೀಡಿರುವ ಅರ್ಜಿ ಪ್ರತಿ | ನಿಪಿ 7 |

ಮೇಲ್ಕಂಡ ದಾಖಲಾತಿಗಳನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅವುಗಳನ್ನು ನಿಶಾನಿಕರೆಸಲಾಗಿದೆ.

ಪ್ರತಿವಾದಿ ಪರ ವಕೀಲರು ಗೈರು ಹಾಜರಿರುವುದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ